# ಕರ್ನಾಟಕ ರಾಜ್ಯ ಮಾನವ ಹಕ್ಕುಗಳ ಆಯೋಗ

ಸಂಖ್ಯೆ: ಮಾ.ಹ.ಆ ಸಂ. 2551/10/18/2018 (ಬಿ-3)

4ನೇ ಮಹಡಿ, 5ನೇ ಹಂತ,
ಬಹು ಮಹಡಿಗಳ ಕಟ್ಟಡ,
ಬೆಂಗಳೂರು, ದಿನಾಂಕ: 27.02.2020
ಫ್ಯಾಕ್ಸ್: 22392206
ಕಚೇರಿ ದೂ: 22392203

ಇಂದ:

ವಿಲೇಖನಾಧಿಕಾರಿಗಳು,
ಕರ್ನಾಟಕ ರಾಜ್ಯ ಮಾನವ ಹಕ್ಕುಗಳ ಆಯೋಗ,
ಬೆಂಗಳೂರು.

ಇವರಿಗೆ:

ಜಿಲ್ಲಾಧಿಕಾರಿಗಳು,
ಶಿವಮೊಗ್ಗ ಜಿಲ್ಲೆ,
ಶಿವಮೊಗ್ಗ.

ಮಾನ್ಯರೆ,

**ವಿಷಯ:** ಹೆಚ್‌ಆರ್‌ಸಿ ಸಂಖ್ಯೆ 2551/10/18/2018 (ಬಿ-3) ದೂರಿನ ಬಗ್ಗೆ.

*****

ಪ್ರಕರಣವನ್ನು ದಿನಾಂಕ 27.02.2020 ರಂದು ಆಯೋಗದ ಮುಂದೆ ಮಂಡಿಸಿದಾಗ, ಆಯೋಗವು ಪರಿಶೀಲಿಸಿ ಈ ಕೆಳಕಂಡಂತೆ ಆದೇಶಿಸಿದೆ.

**ಆದೇಶ**

ಶ್ರೀ ಬಿ.ಡಿ. ಶ್ರೀಧರ್ ಮತ್ತು ಇತರ ಗ್ರಾಮಸ್ಥರು, ಗಿಳಲಗುಂಡಿ, ಆನಂದಪುರಂ ಹೋಬಳಿ, ಸಾಗರ ತಾಲ್ಲೂಕು, ಶಿವಮೊಗ್ಗ ಜಿಲ್ಲೆ ಅವರು ಆಯೋಗಕ್ಕೆ ದೂರು ಸಲ್ಲಿಸಿ, ದನಕ್ಕೆ ಮುಫತ್ ಮತ್ತು ಆಶ್ರಯ ನಿವೇಶನಕ್ಕೆ ಹಾಗೂ ದರಖಾಸ್ತ್ ಬಗರ್‌ಹುಕುಂನಲ್ಲಿ ಗ್ರಾಮಸ್ಥರಿಗೆ ಮಂಜೂರಾಗಿರುವ ಜಮೀನನ್ನು ಅತಿಕ್ರಮಿಸಿಕೊಂಡು ಜನ ಜಾನುವಾರುಗಳನ್ನು ಒಕ್ಕಲೆಬ್ಬಿಸುತ್ತಿರುವ ಬಗ್ಗೆ ತನಿಖೆ ಮಾಡಿ ಸೂಕ್ತ ಕಾನೂನು ಕ್ರಮ ಜರುಗಿಸಿ ಸಂಬಂಧಪಟ್ಟವರಿಗೆ ಸೂಕ್ತ ನಿರ್ದೇಶನ ನೀಡುವಂತೆ ಕೋರಿದ್ದಾರೆ.

ದೂರರ್ಜಿಯ ಬಗ್ಗೆ ಪರಿಶೀಲಿಸಿ ವರದಿ ನೀಡಲು ತಹಶೀಲ್ದಾರ್, ಸಾಗರ ರವರಿಗೆ ಸೂಚಿಸಲಾಗಿದ್ದು ಅದರಂತೆ ತಹಶೀಲ್ದಾರ್, ಸಾಗರ ರವರು ತಮ್ಮ ವರದಿಯಲ್ಲಿ ದಿನಾಂಕ 13.09.2019 ರಂದು ಅರಣ್ಯ ಇಲಾಖೆ, ತಾಲ್ಲೂಕು ಸರ್ವೇಯರ್, ರಾಜಸ್ವ ನಿರೀಕ್ಷಕರು ಹಾಗೂ ಗ್ರಾಮಲೆಕ್ಕಾಧಿಕಾರಿಯವರು ಜಂಟಿ ಸರ್ವೆ ನಡೆಸಿದ್ದು, ಅದರಂತೆ ಗಿಳಾಲಗುಂಡಿ ಗ್ರಾಮದ ಸ.ನಂ. 04 ರಲ್ಲಿ ಒಟ್ಟು 330-20 ಎಕರೆ ವಿಸ್ತೀರ್ಣ ಜಮೀನು ಇದ್ದು, ಇದರಲ್ಲಿ ದನಕ್ಕೆ ಮುಫತ್ತು 75-15 ಎಕರೆ ಹಾಗೂ ಕೆಲವು ಬಗರ್‌ಹುಕುಂ ಸಾಗುವಳಿದಾರರಿಗೆ ಮಂಜೂರಾತಿಯಾಗಿರುವುದಾಗಿ, ದನಕ್ಕೆ ಮುಫತ್ತು ಎಂದಿರುವ ರೆವಿನ್ಯೂ ಭೂಮಿಯಲ್ಲಿ ಸುಮಾರು 15-00 ಎಕರೆ ಪ್ರದೇಶವನ್ನು ಡೀಮ್ಡ್ ಫಾರೆಸ್ಟ್ ಎಂದು ಪರಿಗಣಿಸಿ ಅರಣ್ಯ ಇಲಾಖೆಯಿಂದ ಹಾಲೀ ಪರಿಶೀಲಿಸಿರುವ ಪ್ರಕಾರ ಸಾಗುವಳಿ ಇಲ್ಲದಿರುವ ಜಾಗಕ್ಕೆ ಟ್ರಂಚ್ ನಿರ್ಮಿಸಿರುತ್ತಾರೆ. ಗಿಳಾಲಗುಂಡಿಯ ಕೆಲವು ಗ್ರಾಮಸ್ಥರು ಮಂಜೂರಾತಿ ಹೊಂದಿರುವುದರಿಂದ ತಮ್ಮ ಜಾಗೆಯು ಟ್ರಂಚ್‌ನಿಂದ ಒಳಗೆ ಬರುತ್ತದೆ. ನಾವು ಸಾಗುವಳಿ ಮಾಡಿರುವ ಪ್ರದೇಶವನ್ನು ಸೇರಿಸಿ ಅರಣ್ಯ ಇಲಾಖೆಯವರು ಟ್ರಂಚ್ ನಿರ್ಮಿಸಿದ್ದು, ಸದರಿ ಜಾಗೆಯಲ್ಲಿ ಹತ್ತಿ, ಜೋಳ, ರಾಗಿ ಮುಂತಾದ ಬೆಳೆ ಬೆಳೆದಿದ್ದು, ಸದರಿ ಜಾಗವನ್ನು ಅರಣ್ಯ ಇಲಾಖೆಯವರು ಅತಿಕ್ರಮಿಸಿ ಟ್ರಂಚ್ ತೆಗೆದಿರುವುದರಿಂದ ಸಾಗುವಳಿ ಇಲ್ಲದೇ ಕಾಡು ಬೆಳೆದಿದೆ ಎಂದು ಅರ್ಜಿದಾರರಾದ ಶ್ರೀ ಶ್ರೀಧರ ರವರು ಅಳತೆಯ ಸಮಯದಲ್ಲಿ ಹಾಜರಿದ್ದು ತಿಳಿಸಿರುವುದಾಗಿ ಹಾಗೂ ದಿನಾಂಕ 13.09.2019 ರಂದು ಸ್ಥಳ ಪರಿಶೀಲನೆ ವೇಳೆಯಲ್ಲಿ ದೊರೆತ ಮಾಹಿತಿ ಪ್ರಕಾರ ಸ. ನಂ. 4 ರಲ್ಲಿ ಮಂಜೂರಾತಿಯಾದ ಪ್ರದೇಶವು ಯಾರಿಗೂ ಪೋಡಿ ಆಗಿಲ್ಲದ ಕಾರಣ ಸದರಿ ಜಾಗೆಯನ್ನು ನಿಖರವಾಗಿ ಗುರುತಿಸಿ



K.V

ನಕಾಶೆಯಲ್ಲಿ ತೋರಿಸಲು ಸಾಧ್ಯವಾಗಿರುವುದಿಲ್ಲವಾಗಿ, ಆದರೆ ಅರಣ್ಯ ಇಲಾಖೆಯವರು ಟ್ರಂಚ್ ತೆಗೆದಿರುವ ಜಾಗದಲ್ಲಿ ಈ ಹಂತದಲ್ಲಿ ಯಾವುದೇ ಸಾಗುವಳಿ ಇರುವುದಿಲ್ಲವಾಗಿ, ಬದಲಾಗಿ ಗಿಡಮರಗಳು ಇರುತ್ತದೆ ಎಂದು ಅರ್ಜಿದಾರರು ಸ್ಥಳದಲ್ಲಿ ಹಾಜರಿದ್ದು ಸಹಿ ಮಾಡಲು ನಿರಾಕರಿಸಿರುವುದಾಗಿ, ಹಾಲಿ ಪರಿಶೀಲನೆ ಪ್ರಕಾರ ಅರಣ್ಯ ಇಲಾಖೆಯವರು ನಿರ್ಮಿಸಿದ ಟ್ರಂಚ್ ಒಳಗಡೆ ಯಾವುದೇ ರೀತಿಯ ಸಾಗುವಳಿ ಪ್ರದೇಶ ಕಂಡುಬಂದಿರುವುದಿಲ್ಲವಾಗಿ ಗ್ರಾಮಸ್ಥರ ಮಹಜರ್, ಮೋಜಣಿ ನಕ್ಷೆ ಹಾಗೂ ದಾಖಲೆಗಳೊಂದಿಗೆ ವರದಿ ಸಲ್ಲಿಸಿದ್ದು ಪ್ರಯುಕ್ತ ಘನ ಆಯೋಗದಲ್ಲಿ ದಾಖಲಾಗಿರುವ ಪ್ರಕರಣವನ್ನು ಮುಕ್ತಾಯಗೊಳಿಸುವಂತೆ ಜಿಲ್ಲಾಧಿಕಾರಿ, ಶಿವಮೊಗ್ಗ ಜಿಲ್ಲೆ ಅವರು ಆಯೋಗಕ್ಕೆ ವರದಿ ಸಲ್ಲಿಸಿದ್ದಾರೆ.

ಸದರಿ ವರದಿಯ ಪ್ರತಿಯನ್ನು ದೂರುದಾರರ ಅಭಿಪ್ರಾಯಕ್ಕಾಗಿ ಕಳುಹಿಸಿದ್ದು ಕೆಳಕಂಡಂತೆ ಅಭಿಪ್ರಾಯ ಸಲ್ಲಿಸಿದ್ದಾರೆ.

ಅರಣ್ಯಾಧಿಕಾರಿಗಳ ದಿನಾಂಕ 08.06.2018 ರ "ಹಿಂಬರಹ" ದಲ್ಲಿ ಡೀಮ್ಡ್ ಫಾರೆಸ್ಟ್ ಒಟ್ಟು 60.00 ಎಕರೆ ಎಂದು ಗುರುತಿಸಿ ಸದರಿ ಭೂಮಿಯು ಅರಣ್ಯ ಗುಣ ಲಕ್ಷಣಗಳನ್ನು ಹೊಂದಿದ್ದು ಹಲವು ವರ್ಷಗಳ ಹಿಂದೆಯೇ ಜಾನುವಾರು ನಿರೋಧಕ ಕಂದಕ ನಿರ್ಮಿಸುವುದರೊಂದಿಗೆ ಇಲಾಖಾ ವಶಕ್ಕೆ ತೆಗೆದುಕೊಂಡು (ಈ ಬಗ್ಗೆ ಸರ್ಕಾರ ಆದೇಶ ಹೊರಡಿಸಿರುವ ಬಗ್ಗೆ ಗ್ರಾಮಸ್ಥರುಗಳಿಗೆ ಸಂಶಯವಿರುತ್ತದೆ) ಇಲಾಖೆಯಿಂದ ಪರಿಭಾವಿತ ಅರಣ್ಯ ಪ್ರದೇಶದಲ್ಲಿ ಮಾತ್ರ ನೆಡುತೋಪು ರಚನೆಗೆ ಗುಂಡಿ ತೆಗೆಸಲಾಗಿರುತ್ತದೆ ಎಂಬಿತ್ಯಾದಿ ಮಾಹಿತಿಯೊಂದಿಗೆ ಗ್ರಾಮಸ್ಥರಿಗೆ ಭಯ ಭೀತಿ ಮೂಡಿಸಿ, ಬೆದರಿಸುವ, ಕೆರಳಿಸುವ ಅವಮಾನಿಸುವ ಕೃತ್ಯವೆಸಗಿರುತ್ತಾರೆ ಮತ್ತು ದನಕ್ಕೆ ಮುಫತ್ತು ಎಂದಿರುವ ಹಾಗೂ ಗ್ರಾಮಸ್ಥರು ಹತ್ತಿ, ಜೋಳ, ರಾಗಿ ಮುಂತಾದ ಬೆಳೆ ಬೆಳೆದಿದ್ದ ಜಾಗವನ್ನು ಅರಣ್ಯ ಇಲಾಖೆಯವರು ಅತಿಕ್ರಮಿಸಿ ಜಾನುವಾರು ನಿರೋಧಕ (ಟ್ರಂಚ್) ಕಂದಕ ನಿರ್ಮಾಣದೊಂದಿಗೆ ತಂತಿ-ಬೇಲಿ ನಿರ್ಮಿಸಿ ಜನ-ಜಾನುವಾರುಗಳು ಹೋಗದಂತೆ ತಡೆದು ಗ್ರಾಮಸ್ಥರಿಗೆ ಮಾರಕವಾದ ತೊಂದರೆ ಉಂಟು ಮಾಡಿ ಜನ-ಜಾನುವಾರುಗಳ ಸಾವಿಗೂ ಕಾರಣವಾಗಿರುತ್ತದೆ.

ಅರಣ್ಯಾಧಿಕಾರಿಗಳು ಕುರಚಲು ಗಿಡಗಳಿರುವ ಪ್ರದೇಶಗಳನ್ನೆಲ್ಲಾ ಪರಿಭಾವಿತ ಅರಣ್ಯ ಪ್ರದೇಶವೆಂದು ಗುರುತಿಸಿ, ಸದರಿ ಭೂಮಿಯು ಅರಣ್ಯ ಗುಣ ಲಕ್ಷಣಗಳನ್ನು ಹೊಂದಿದ್ದು ಎಂದು ಈ ಪ್ರದೇಶದಲ್ಲಿ ಅಕ್ರಮವಾಗಿ ನೆಡುತೋಪು ರಚನೆಗೆ ಗುಂಡಿ ತೆಗೆಸಿ ಗಿಡ ನೆಡುವುದರೊಂದಿಗೆ ಕುರುಚಲು ಪ್ರದೇಶವನ್ನು ಪರಭಾವಿತ ಅರಣ್ಯ ಪ್ರದೇಶವೆಂದು ಸೃಷ್ಟಿಸಲು ಪ್ರಯತ್ನಿಸುತ್ತಿರುವುದರೊಂದಿಗೆ ಅಧಿಕಾರ ಹಾಗೂ ಸರ್ಕಾರದ ಹಣವನ್ನು ಅರಣ್ಯಾಧಿಕಾರಿಗಳು ದುರುಪಯೋಗಪಡಿಸಿಕೊಂಡಿರುವ ಅನುಮಾನ ವ್ಯಕ್ತವಾಗಿರುತ್ತದೆ.

ಅಜಾಪುರ ಗ್ರಾಮ ಪಂಚಾಯ್ತಿ ಅಧ್ಯಕ್ಷರ ಕೋರಿಕೆ ಮತ್ತು ಗ್ರಾಮಸ್ಥರ ಮನವಿಯಂತೆ ತಲೆ-ತಲಾಂತರಗಳಿಂದ ಸಾಗುವಳಿ ಮಾಡಿಕೊಂಡು ಬರುತ್ತಿರುವ ಗ್ರಾಮಸ್ಥರ ಜಮೀನು ಮತ್ತು ದನಕ್ಕೆ ಮುಫತ್ತಾಗಿರುವ ಜಮೀನಿನ ವಿಸ್ತೀರ್ಣವನ್ನು ನಿಖರವಾಗಿ ಗುರುತಿಸಿ ಅರಣ್ಯ ಇಲಾಖೆಯಿಂದ ಗ್ರಾಮಸ್ಥರಿಗೆ ಆಗಿರುವ ನಷ್ಟ ಮತ್ತು ಅನ್ಯಾಯವನ್ನು ಇತ್ಯರ್ಥ ಪಡಿಸಿಕೊಡಬೇಕಾಗಿರುತ್ತದೆ.

ಮೇಲ್ಕಂಡ ವಿಚಾರಗಳನ್ನೆಲ್ಲಾ ತಾವು ಕೂಲಂಕಷವಾಗಿ ಪರಿಶೀಲಿಸುವುದರೊಂದಿಗೆ, ಈ ವಿಷಯಗಳನ್ನು ಗಂಭೀರವೆಂದು ಪರಿಗಣಿಸಿ ಸಂಕಷ್ಟದಲ್ಲಿರುವ ಗ್ರಾಮಸ್ಥರ ರಕ್ಷಣೆಗೆ ತಾವು ಸೂಕ್ತ ಕ್ರಮಗಳನ್ನು ಕೈಗೊಳ್ಳಬೇಕೆಂದು ಈ ಮೂಲಕ ವಿನಮ್ರವಾಗಿ ತಮ್ಮಲ್ಲಿ ಮನವಿ ಮಾಡಿಕೊಂಡಿರುತ್ತೇವೆ.

ದೂರು, ವರದಿ ಮತ್ತು ಅಭಿಪ್ರಾಯವನ್ನು ಪರಿಶೀಲಿಸಲಾಗಿ, ದೂರುದಾರರು ದೂರಿನೊಂದಿಗೆ RTC/MR ಗಳಲ್ಲಿ ಕೆಲವರಿಗೆ ದರಖಾಸ್ತು ಮೂಲಕ ಭೂಮಿ ಮಂಜೂರಾಗಿದ್ದು ಎಂ.ಆರ್. ಕೂಡ ಆಗಿರುವುದು ಕಂಡುಬರುತ್ತಿದೆ. ಅಲ್ಲದೆ ಸರ್ವೆ ನಂಬರ್ 04 ರಲ್ಲಿ ಮಂಜೂರಾತಿ ಆಗಿರುವ ಪ್ರದೇಶವು ಯಾರಿಗೂ ಪೋಡಿ ಆಗಿಲ್ಲದ ಕಾರಣ ಜಾಗೆಯನ್ನು ನಿಖರವಾಗಿ ಗುರುತಿಸಿ ನಕಾಶೆಯಲ್ಲಿ ತೋರಿಸಲು ಸಾಧ್ಯವಾಗಿರುವುದಿಲ್ಲವೆಂದು ವರದಿಯಲ್ಲಿ ತಿಳಿಸಲಾಗಿದೆ. ದರಖಾಸ್ತು ಮೂಲಕ ರೈತರಿಗೆ ಭೂಮಿಯನ್ನು ಮಂಜೂರು ಮಾಡಿದ ನಂತರ ಅಳತೆ ಮಾಡಿ ಗಡಿ ಗುರುತಿಸಿ, ಪೋಡಿ ಮಾಡಬೇಕಾದದ್ದು ಕಂದಾಯ ಇಲಾಖೆಯ ಹೊಣೆ ಹಾಗೂ ಕರ್ತವ್ಯ ಕೂಡ ಆಗಿರುತ್ತದೆ.

ಕಂದಾಯ ಇಲಾಖೆಯು ತನ್ನ ಕರ್ತವ್ಯವನ್ನು ಸರಿಯಾಗಿ ನಿರ್ವಹಿಸದೇ ಯಾರಿಗೂ ಪೋಡಿ ಆಗಿಲ್ಲದ ಕಾರಣ ಸದರಿ ಜಾಗೆಯನ್ನು ಗುರುತಿಸಿ ನಕಾಶೆಯಲ್ಲಿ ತೋರಿಸಲು ಸಾಧ್ಯವಾಗಿಲ್ಲ ಎಂಬುದನ್ನು ಒಪ್ಪಲಾಗುವುದಿಲ್ಲ. ಆದುದರಿಂದ, ಈ ಬಗ್ಗೆ

ಖುದ್ದಾಗಿ ಪರಿಶೀಲಿಸಿ, ದರಖಾಸ್ತು ಮೂಲಕ ಎಷ್ಟು ಜನರಿಗೆ ಭೂಮಿಯನ್ನು ಮಂಜೂರು ಮಾಡಲಾಗಿದೆಯೋ, ಅದರಂತೆ ಅಳತೆ ಮಾಡಿ, ಗಡಿ ಗುರುತಿಸಿ, ಒಂದು ವೇಳೆ ರೈತರಿಗೆ ಮಂಜೂರಾದ ಜಮೀನಿನಲ್ಲಿ ಅರಣ್ಯ ಇಲಾಖೆಯವರು ಕಂದಕ ತೆಗೆದಿದ್ದಲ್ಲಿ ಅದನ್ನು ತೆರವುಗೊಳಿಸಿ, ಮಂಜೂರಾತಿದಾರರಿಗೆ ಬಿಡಿಸಿಕೊಡಲು ನಿಯಮಾನುಸಾರ ಒಂದು ತಿಂಗಳ ಒಳಗಾಗಿ ಕ್ರಮ ಕೈಗೊಳ್ಳುವಂತೆ, ಜಿಲ್ಲಾಧಿಕಾರಿಗಳು, ಶಿವಮೊಗ್ಗ ಜಿಲ್ಲೆ ಅವರಿಗೆ ಆದೇಶಿಸಿ, ಪ್ರತಿಯನ್ನು ಡಿ.ಸಿ.ಎಫ್. ಶಿವಮೊಗ್ಗ ಜಿಲ್ಲೆ ಅವರಿಗೂ ಕಳುಹಿಸಿ, ಆಯೋಗದಲ್ಲಿಯ ಪ್ರಕರಣವನ್ನು ಮುಕ್ತಾಗೊಳಿಸಲಾಗಿದೆ.

**ಮೇಲ್ಕಂಡ ಆದೇಶದಂತೆ** "ಸೂಕ್ತ ಕ್ರಮಕ್ಕಾಗಿ ಕಳುಹಿಸಿ, ಪ್ರಕರಣವನ್ನು ಮುಕ್ತಾಯಗೊಳಿಸಲಾಗಿದೆ"

ತಮ್ಮ ವಿಶ್ವಾಸಿ,

ವಿಲೇಖನಾಧಿಕಾರಿ,
ಕರ್ನಾಟಕ ರಾಜ್ಯ ಮಾನವ ಹಕ್ಕುಗಳ ಆಯೋಗ,
ಬೆಂಗಳೂರು.

**ಪ್ರತಿಯನ್ನು:**

1. ಶ್ರೀ ಬಿ.ಡಿ. ಶ್ರೀಧರ್ ಮತ್ತು ಇತರ ಗ್ರಾಮಸ್ಥರು, ಗಿಳಲಗುಂಡಿ, ಆನಂದಪುರಂ ಹೋಬಳಿ, ಸಾಗರ ತಾಲ್ಲೂಕು, ಶಿವಮೊಗ್ಗ ಜಿಲ್ಲೆ.
2. ಉಪಸಂರಕ್ಷಣಾಧಿಕಾರಿಗಳು, ಶಿವಮೊಗ್ಗ ಜಿಲ್ಲೆ.



K.V.